## ಚಂದದ ಹರಟೆಯ ಘಮ

ಚಂದನದ 'ಹರಟೆ...'ಯಲ್ಲಿ ನೌಕರರ ವರ್ಗಾವಣೆಯ ಪರ – ವಿರೋಧ ಚರ್ಚೆ ರಸಮಯವಾಗಿತ್ತು. ಕೊನೆಯಲ್ಲಿ ಎಂ.ಎಸ್. ನರಸಿಂಹಮೂರ್ತಿ, ಮಾಲೂರಿನಲ್ಲಿ ಮೈಸೂರು ಬ್ಯಾಂಕ್ ಶಾಖೆಯ ವ್ಯವಸ್ಥಾಪಕರಾಗಿದ್ದಾಗ ಶಿಕ್ಷಕರು ಸಾಲಸೌಲಭ್ಯ ಪಡೆಯಲು ಶಾಲೆಗೆ ರಜೆ ಹಾಕಿ ಬರುತ್ತಿದ್ದರು. ಅವರಿಗೆ ನೆರವು ಕಲ್ಪಿಸುವ ಸಲುವಾಗಿ ಕಚೇರಿಯಲ್ಲಿ ಸಂಜೆ ಏಳರವರೆಗೆ ನಿಮಗಾಗಿ ಇರುತ್ತೇನೆ. ಕರ್ತವ್ಯ ಮುಗಿಸಿಕೊಂಡು ಬನ್ನಿ ಎಂದು ಹೇಳಿ ಅವರಿಗೆ ನೆರವಾದ ಪರಿ ಅನನ್ಯ.

ಸರ್ಕಾರಿ ಉದ್ಯೋಗ ಸಿಕ್ಕವರು ಅದು ನಮ್ಮ ಸೌಭಾಗ್ಯ ಎಂದು ಕಾರ್ಯ ನಿರ್ವಹಿಸಬೇಕು. ಸಾರ್ವಜನಿಕರ ಋಣ ನಮ್ಮ ಮೇಲಿರುತ್ತದೆ. ಅವರಿಗೆ ನೆರವು ಕಲ್ಪಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. ನಿಂತ ನೀರು ಕೊಚ್ಚೆ, ಹರಿವ ನೀರು ತೀರ್ಥ ಎನ್ನುವ ಹಾಗೆ ವರ್ಗಾವಣೆ, ದೇಶ ಸುತ್ತುವ ಸುವರ್ಣಾವಕಾಶ ಎನ್ನುವ ಮಾತುಗಳ ಮೂಲಕ ಕಾರ್ಯಕ್ರಮದ ಘನತೆಯನ್ನು ಹೆಚ್ಚಿಸಿದರು.

—ಮಲ್ಲಿಕಾರ್ಜುನ ಸುರಧೇನುಪುರ

## ದಾಸ ಪುರಂದರನಿಗೆ ಶರಣು

ಅದೇ ಹಳೆಯ ಕಥೆಗಳನ್ನು ಹೊಸ ಹೊಸ ಅವತಾರಗಳಲ್ಲಿ ನೋಡಿ ನೋಡಿ ಕಥೆ ಮುಂದೇನಾಗುತ್ತದೆ ಎಂದು ನಾವೇ ಊಹೆ ಮಾಡುವಂತೆ ಆಗಿದೆ. ಕುತೂಹಲಕಾರಿ ಹಾಗೂ ಮನಸ್ಸಿಗೆ ಹಿತ ನೀಡುವ, ಆಧ್ಯಾತ್ಮಿಕ ಜ್ಞಾನದ ಜೊತೆ ಮಾನವೀಯ ಗುಣಗಳನ್ನು ಸಾರುವ 'ದಾಸ ಪುರಂದರ' ಹರಿದಾಸರನ್ನು ನಮಗೆಲ್ಲ ಧಾರಾವಾಹಿ ಮುಖೇನ ಸವಿವರವಾಗಿ ಪರಿಚಯಿಸುತ್ತಿರುವ ಕಲರ್ಸ್ ಕನ್ನಡ ವಾಹಿನಿಯ ಪ್ರಯತ್ನ ಸಫಲವಾಗಲಿ.

—ಆಕಸ್ಮಿತ ಪ್ರದೀಪ್, ಬೆಂಗಳೂರು

## ಹಳೇ ಚಪ್ಪಲಿ ಕಥೆ

ಕಲರ್ಸ್‌ನ 'ದೊರೆಸಾನಿ'ಯಲ್ಲಿ ಸಿಂಚನಾ ಚಪ್ಪಲಿ ಅಂಗಡಿಯಲ್ಲಿ ಒಂದು ಜೊತೆ ಚಪ್ಪಲಿ ಖರೀದಿಸಿ ಅದನ್ನು ಇಪ್ಪತ್ತು ವರ್ಷ ಹಳೆಯದನ್ನಾಗಿ ಮಾಡಲು ರಸ್ತೆ ದೂಳಿನಲ್ಲಿ ಹೊರಳಾಡಿಸುತ್ತಾಳೆ. ಆದರೆ ಅದನ್ನು ತೊಳೆದರೆ ಅಥವಾ ಪಾಲಿಷ್ ಮಾಡಿದರೆ ಹೊಸದಾಗಿಯೇ ಕಾಣುತ್ತದೆ. ಬಣ್ಣ ಮಾಸುವುದಿಲ್ಲ. ಹಳೆಯದಾಗಿ ಕಾಣಲು ಅದು ಸವೆಯುವುದೂ ಇಲ್ಲ. ಹಳೆಯ ಚಪ್ಪಲಿಯಂತೆ ಕಾಣಿಸಲು ಬಳಸಿದಂತೆ ಕಾಣಬಾರದೇ? ಇಂತಹ ದೃಶ್ಯಗಳು ತಮಾಷೆ ಮತ್ತು ಲೇವಡಿಗೆ ಆಹಾರ ಒದಗಿಸಬಾರದು.

—ರಮಾನಂದ ಶರ್ಮಾ, ಬೆಂಗಳೂರು

ವಾರದ ಪತ್ರ

## ರಾಮಾಚಾರಿ ಮಹಾತ್ಮೆ

'ರಾಮಾಚಾರಿ' ಈ ನಾಲ್ಕು ಅಕ್ಷರಗಳಲ್ಲಿ ಅದೇನೋ ಮೋಡಿ. ವಿಷ್ಣುವರ್ಧನ್ ಅಪಾರ ಅಭಿಮಾನಿಗಳನ್ನು ಸಂಪಾದಿಸಿದ 'ನಾಗರ ಹಾವು', ರವಿಚಂದ್ರನ್ ಅವರಿಗೆ 'ರಾಮಾಚಾರಿ' ಅಭಿನಯ ರಂಗಕ್ಕೆ ಜೀವದಾನ ನೀಡಿತು. 'ಅಲ್ಲಿ ರಾಮಾಚಾರಿ ಇಲ್ಲಿ ಬ್ರಹ್ಮಚಾರಿ' ಯಶ್ ಯಶೋಗಾಥೆಗೆ ಮೆಟ್ಟಿಲಾಯಿತು. 'ಮಿ.ಅಂಡ್ ಮಿಸೆಸ್ ರಾಮಾಚಾರಿ' ಎಲ್ಲವೂ ಆಯಾ ಕಾಲಘಟ್ಟದ ಸೂಪರ್ ಹಿಟ್ ಚಿತ್ರಗಳು.

ಕಲರ್ಸ್ ಸೂಪರ್‌ನ 'ರಾಮಾಚಾರಿ' ಧಾರಾವಾಹಿ ಅದೇ ಪರಂಪರೆಯನ್ನು ಎತ್ತಿ ಹಿಡಿದಿದೆ. ಸನಾತನ ಧರ್ಮದ ಹಿನ್ನೆಲೆ, ಆಗಾಗ ಮಂತ್ರಘೋಷ, ಕರ್ಣಹಿತ ಸಂಗೀತ, ಸರ್ಕಸ್ ಇಲ್ಲದ ಛಾಯಾಗ್ರಹಣ, ಕಲಾವಿದರ ಉತ್ತಮ ಅಭಿನಯ, ಎಳೆದಾಟ ಇಲ್ಲದ ನಿರ್ದೇಶನ, ಇದೆಲ್ಲಕ್ಕೂ ಮಿಗಿಲಾಗಿ ಶಂಕರ್ ಅಶ್ವತ್ಥ್, ಗುರುದತ್, ಅಂಜಲಿ, ಭಾವನಾ, ಬಾಲರಾಜ್, ಜಹಾಂಗೀರ್ ಮೊದಲಾದ ಪ್ರತಿಭಾನ್ವಿತರ ಪ್ರವೇಶ ಮನ ಸೆಳೆಯುತ್ತದೆ.

—ಕೆ. ಶ್ರೀನಿವಾಸ ರಾವ್, ಹರಪನಹಳ್ಳಿ

## ಶಿವಮಯ ಗಾಯನ

ಝೀ ಕನ್ನಡದ 'ಸರಿಗಮಪ' ಮುಕ್ತಾಯವಾಯಿತು. ಶಾರದಾ ಆವರ್ತನ ಟ್ರೋಫಿ ನಂದಿತಾ ಟೀಮ್‌ಗೆ ಸಿಕ್ಕಿತು. ಸ್ಪರ್ಧಿಗಳು ಸೊಗಸಾಗಿ ಹಾಡಿ ಪ್ರತಿವಾರವೂ ನಮ್ಮನ್ನು ರಂಜಿಸುತ್ತಿದ್ದರು.

ಹರ್ಷ, ಪೃಥ್ವಿ, ಅನ್ವಿತಾ, ಕೀರ್ತನಾ, ಶ್ರೀನಿಧಿ ಅವರ ಗಾಯನ ಮೆಚ್ಚುಗೆಯಾಯಿತು. ಸೆಮಿ ಫೈನಲ್‌ನಲ್ಲಿ ಪೃಥ್ವಿ ಹಾಗೂ ಅನ್ವಿತಾ 'ಜಗದೋದ್ಧಾರನ ಆಡಿಸಿದಳು ಯಶೋಧಾ...' ಎಂಬ ಪುರಂದರ ದಾಸರ ಹಾಡಿನ ಮೂಲಕ ನಮಗೆ ಬಾಲಕೃಷ್ಣನ ದರ್ಶನವನ್ನೇ ಮಾಡಿಸಿದರು. ಸೆಮಿಫೈನಲ್‌ನಲ್ಲಿ ಅವರ ಚಂದದ ಗಾಯನವನ್ನು ಕೇಳಿದ ನಾವು ಫಿನಾಲೆಯಲ್ಲಿ ಹೇಗೆ ಹಾಡಬಹುದು ಎಂದು ಕುತೂಹಲದಿಂದ ಕಾಯುತ್ತಿದ್ದೆವು. ನಮ್ಮ ನಿರೀಕ್ಷೆಯನ್ನು ಹುಸಿಮಾಡದೆ ಒಳ್ಳೆಯ ಹಾಡುಗಳನ್ನು ಆಯ್ಕೆಮಾಡಿಕೊಂಡು ಹಾಡಿದರು. ಅನ್ವಿತಾ ಹಾಡಿದ 'ಶಿವ ಶಿವ ಎನ್ನದ ನಾಲಿಗೆ ಏಕೆ' ಎಂಬ ಹಾಡು ಬಹಳ ಅಮೋಘವಾಗಿತ್ತು.

—ಕೆ.ಎಸ್. ಸವಿತ, ಬೆಂಗಳೂರು

ಸುಖಾಂತ್ಯ: ಝೀ ಕನ್ನಡದ 'ಸರಿಗಮಪ' ಚಾಂಪಿಯನ್ ಫೈನಲ್ ಸುಂದರವಾಗಿತ್ತು. ಪ್ರತಿ ಸ್ಪರ್ಧಿಗಳ ಹಾಡು ಮನರಂಜಿಸಿದವು. ಬಹುತೇಕ ಸ್ಪರ್ಧಿಗಳು ಶಿವನ ಕುರಿತೇ ಹಾಡಿದ ಶೈಲಿ ಶಿವರಾತ್ರಿ ಸಮಯಕ್ಕೆ ಮೆಚ್ಚುವಂತದ್ದು.

—ಅಂಚೆ ಸುಬ್ರಹ್ಮಣ್ಯ, ಕೊಪ್ಪ

## ಕನ್ನಡತಿಗೆ ಪ್ರಶ್ನೆಗಳು

1. ಹಳೆ ಸೌಪರ್ಣಿಕಾ ಮತ್ತು ಅವಳ ಬಾಯ್ ಫ್ರೆಂಡ್ ಬ್ಯಾಂಕ್ ಉದ್ಯೋಗಿ ಏನಾದರು? 2. ವರೂದಿನಿ ಅಕೌಂಟ್‌ನಿಂದ ದುಡ್ಡು ಲಪಟಾಯಿಸಿದ್ದ ಘಟನೆಗೆ ತಾರ್ಕಿಕ ಅಂತ್ಯ ಯಾಕಿಲ್ಲ? 3. ಶಿವು ಮರ್ಡರ್ ಕೇಸ್ ತನಿಖೆ ಆಗಲೇ ಇಲ್ಲ ಏಕೆ? 4. ವರೂದಿನಿ ಪಾರ್ಟಿಯ ಡ್ರಗ್ಸ್ ಕೇಸ್ ಅಪರಾಧಿಗೆ ಶಿಕ್ಷೆ ಏಕಿಲ್ಲ? 5. ಸಾನಿಯಾ ಹಲವಾರು ಬಾರಿ ಕೊಲೆಯತ್ನ ಮಾಡಿದರೂ ಅವಳಿಗೆ ಶಿಕ್ಷೆ ಕೊಡದೆ ಸಮಾಜಕ್ಕೆ ಯಾವ ಸಂದೇಶ ಕೊಡುತ್ತಿದ್ದೀರಿ? ಪದೇ ಪದೇ ಸುಫಾರಿ ಕೊಡುವುದು ಕೌರ್ಯಕ್ಕೆ ಪ್ರಾಮುಖ್ಯತೆ ಕೊಡುವುದರ ಉದ್ದೇಶ ಏನು ಎಂದು ನಿರ್ದೇಶಕರು ಸ್ಪಷ್ಟನೆ ನೀಡಬಹುದೇ?

—ಮೇಘನಾ ರಘುನಂದನ್, ಹೂವಿನಹಡಗಲಿ

ಮುಜುಗರದ ಕಥೆ: ಕಲರ್ಸ್ ಕನ್ನಡದ 'ಕನ್ನಡತಿ'ಯನ್ನು ಇತ್ತೀಚೆಗೆ ನೋಡಲು ಬಹಳ ಮುಜುಗರವಾಗುತ್ತಿದೆ. ಒಂದಾದ ಮೇಲೆ ಒಂದರಂತೆ ಸಾನಿಯಾ ಸುಫಾರಿ ಕೊಡುತ್ತಿದ್ದಾಳೆ. ಇದು ಮುಂದಿನ ಪೀಳಿಗೆಗೆ ದುರ್ನಡೆಯ ಪಾಠ ಕಲಿಸಿದಂತಾಗುವುದಿಲ್ಲವೆ? ಇನ್ನಾದರೂ ಇಂತಹ ಅಸಂಬದ್ಧ ಸನ್ನಿವೇಶಗಳನ್ನು ತೆಗೆದು ಹಾಕುತ್ತಾರೆಂದು ಭಾವಿಸೋಣವೆ?

—ಉಷಾ ನಾಗರಾಜ, ಬೆಂಗಳೂರು

## ರಂಜನೀಯ ಜೇನುಗೂಡು

ಸ್ಟಾರ್ ಸುವರ್ಣದ 'ಜೇನುಗೂಡು' ಒಳ್ಳೆ ಮನೋರಂಜನೆ ನೀಡುತ್ತದೆ. ಇಂದಿನ ದಿನಗಳಲ್ಲಿ ಅವಿಭಕ್ತ ಕುಟುಂಬಗಳು ವಿರಳವಾಗುತ್ತಿವೆ. ಕಥಾ ಶೀರ್ಷಿಕೆಗೆ ತಕ್ಕಂತೆ ಜೇನುಗೂಡಿನಂಥ ಅವಿಭಕ್ತ ಕುಟುಂಬವೊಂದು ಪ್ರೀತಿ, ವಾತ್ಸಲ್ಯ ಸೌಹಾರ್ದತೆಯಿಂದ ಇಲ್ಲಿ ಕಾಣಿಸುತ್ತಿದೆ. ಉತ್ತರಕರ್ನಾಟಕದ ಸೊಗಡಿನಲ್ಲಿ ನವಿರಾದ ಹಾಸ್ಯವನ್ನು ಕಟ್ಟಿಕೊಟ್ಟಿರುವುದು. ಮನೆಮಗಳ ಮದುವೆಯ ಸಾಂದರ್ಭಿಕವಾಗಿ ಅನೂಚಾನವಾಗಿ ನಡೆದುಕೊಂಡುಬರುತ್ತಿರುವ ಸಂಪ್ರದಾಯವನ್ನೂ ಶಾಸ್ತ್ರಗಳನ್ನು ಪಾಲಿಸಿರುವುದು ಚೆನ್ನಾಗಿದೆ.

ವಿಜ್ಞಾನಿಯಾದ ಮನೆ ಮಗನಿಗೆ ವಿದೇಶಕ್ಕೆ ಹೋಗಲು ಸದಾವಕಾಶ ಒದಗಿಬಂದರೂ ಮನೆಯ ಕೂಡುಕುಟುಂಬವನ್ನು ಅಗಲಿ ಇರಲಾರದೆ ನಿರಾಕರಿಸಿ ತನ್ನವರೊಡನೆ ಇರಲು ನಿಶ್ಚಯಿಸಿದ್ದು ಶ್ಲಾಘನೀಯ.

—ಪೂರ್ಣಿಮಾ ಮೂರ್ತಿ, ಬೆಂಗಳೂರು